# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಬಿ.ಲಕ್ಷ್ಮೀಪತಿ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಆದೇಶ.

ಓದಲಾಗಿದೆ:- ಮಾನ್ಯ ಉಪ ಲೋಕಾಯುಕ್ತ-2, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ-12(3)ರಡಿ ಸಲ್ಲಿಸಿರುವ ವರದಿ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-806/2015/ಡಿಆರ್‌ಇ-01/ ದಿ:21.02.2017.

---

**ಪ್ರಸ್ತಾವನೆ:-**

ನಿಬಂಧಕರು, ಕರ್ನಾಟಕ ಉಪಲೋಕಾಯುಕ್ತ-2, ಬೆಂಗಳೂರು ಇವರು ಮೇಲೆ ಓದಲಾದ ವರದಿಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ-12(3)ರನ್ವಯ ಮಾನ್ಯ ಉಪಲೋಕಾಯುಕ್ತ-2 ಇವರು ಸಲ್ಲಿಸಿರುವ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದಲ್ಲಿ ಶ್ರೀ ಜಿ.ಕೆ. ಚನ್ನನಗೌಡ ಬಿನ್ ಕಲ್ಲಂಗಪ್ಪ, ಹನುಮಂತಾಪುರ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ದೂರುದಾರರಾಗಿದ್ದು, ಜಗಳೂರು ತಾಲ್ಲೂಕು, ಹನುಮಂತಾಪುರ ಗ್ರಾಮ ಪಂಚಾಯಿತಿಗೆ ಸೇರಿದ ಗ್ರಾಮಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳಡಿ ನಕಲಿ ದಾಖಲೆ ಸೃಷ್ಟಿ ಮಾಡಿ, ಫೋರ್ಜರಿ ಸಹಿ ಮಾಡಿ, ರೂ.2.00 ಕೋಟಿ ಹಣವನ್ನು ಈ ಕೆಳಕಂಡ ಎದುರುದಾರರು ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ದೂರು ಸಲ್ಲಿಸಿದ್ದು, ಸದರಿ 4 ಅಧಿಕಾರಿ/ನೌಕರರುಗಳ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ-9ರಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತಾರೆ.

| ಕ್ರ ಸಂ. | ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|---|
| 1 | ಶ್ರೀ ಜಿ. ಲಕ್ಷ್ಮೀಪತಿ (ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆ) ಹಾಲಿ ಕಾರ್ಯನಿರ್ವಾಹಕ ಅಧಿಕಾರಿ | 1 |
| 2 | ಶ್ರೀ ಭರಮಪ್ಪ, ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯಿತಿ, ಜಗಳೂರು ತಾ: ದಾವಣಗೆರೆ ಜಿಲ್ಲೆ | 2 |
| 3 | ಶ್ರೀ ತಿಪ್ಪೇಸ್ವಾಮಿ, ಪಿಡಿಓ, ಹನುಮಂತಾಪುರ ಗ್ರಾ.ಪಂ, ಜಗಳೂರು ತಾ: ದಾವಣಗೆರೆ ಜಿಲ್ಲೆ | 3 |
| 4 | ಶ್ರೀ ಲೋಹಿತ್ ಕುಮಾರ್, ಪಿಡಿಓ, ಹನುಮಂತಾಪುರ ಗ್ರಾ.ಪಂ, ಜಗಳೂರು ತಾ: ದಾವಣಗೆರೆ ಜಿಲ್ಲೆ | 4 |

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ವರದಿ ಸಲ್ಲಿಸಿದ್ದು, ಅವರ ವರದಿಯಲ್ಲಿ ದೂರು ವಿಚಾರಣಾ ಸಮಯದಲ್ಲಿ ಹನುಮಂತಾಪುರ ಗ್ರಾಮದ ಓಬಯ್ಯನ ಕಟ್ಟೆಯ ಬಳಿ ಕೆರೆಯ ಕಾಮಗಾರಿಯನ್ನು ಹಾಗೂ ಹನುಮಂತಾಪುರ ಗ್ರಾಮದ ಸರ್ಕಾರಿ ಶಾಲೆಯಿಂದ ಬಸವರಾಜ್‌ರವರ ಮನೆಯವರೆಗೂ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೂಲಿ ಕಾರ್ಮಿಕರಿಂದ ಕೆಲಸ ಮಾಡಿಸಿರುವುದು ಕಂಡು ಬಂದಿರುತ್ತದೆ. ಹನುಮಂತಾಪುರ ಗ್ರಾಮದ ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ 2011–12ನೇ ಸಾಲಿನಲ್ಲಿ 32 ಫಲಾನುಭವಿಗಳು ಹಾಗೂ 2012–13ನೇ ಸಾಲಿನಲ್ಲಿ 41 ಫಲಾನುಭವಿಗಳು ಅಂದರೆ ಒಟ್ಟು 73 ಜನ ಫಲಾನುಭವಿಗಳಿಗೆ ಅಂದಿನ ಪಿ.ಡಿ.ಓ ಶ್ರೀ ಲಕ್ಷ್ಮೀಪತಿ ಇವರು ಪಂಚಾಯಿತಿಯಿಂದ ಹಣವನ್ನು ಚೆಕ್ ಮುಖಾಂತರ ನೀಡಿದ್ದು, ಆ ಹಣ ಸಾಕಾಗದ ಕಾರಣ ಶೌಚಾಲಯ ಕಟ್ಟದೆ ಹನುಮಂತಾಪುರ ಗ್ರಾಮ ಪಂಚಾಯತ್ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳು ತಮ್ಮ ಸ್ವಂತ ಹಣದಲ್ಲಿ ಶೌಚಾಲಯವನ್ನು ಕಟ್ಟಿದ ನಂತರ ಹಣ ಮಂಜೂರು ಮಾಡಬೇಕಾಗಿರುತ್ತದೆ. ಆದರೆ ಈ ನಿಯಮಗಳನ್ನು ಉಲ್ಲಂಘಿಸಿ, ಹಿಂದಿನ ಪಿಡಿಓ ಆಗಿದ್ದ ಶ್ರೀ ಲಕ್ಷ್ಮೀಪತಿಯವರು ಹಣವನ್ನು ಫಲಾನುಭವಿಗಳಿಗೆ ಮುಂಚಿತವಾಗಿ ನೀಡಿ ನಿಯಮವನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದಿರುತ್ತದೆ ಎಂದು ವರದಿಸಿರುತ್ತಾರೆ.

ಮೊದಲನೇ ಎದುರುದಾರರಾದ ಶ್ರೀ ಬಿ.ಲಕ್ಷ್ಮೀಪತಿ (ಹಿಂದಿನ ಗ್ರಾ.ಪಂ. ಕಾರ್ಯದರ್ಶಿ, ಹನುಮಂತಾಪುರ ಗ್ರಾ.ಪಂ, ದಾವಣಗೆರೆ ಜಿಲ್ಲೆ), ಹಾಲಿ ಕಾರ್ಯನಿರ್ವಾಹಕ ಅಧಿಕಾರಿ ತಮ್ಮ ಆಕ್ಷೇಪಣೆಯಲ್ಲಿ ಹನುಮಂತಾಪುರ ಗ್ರಾಮದ ಸರ್ಕಾರಿ ಶಾಲೆಯಿಂದ ಬಸವರಾಜ್‌ರವರ ಮನೆಯವರೆಗೆ ಉದ್ಯೋಗಖಾತರಿ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೂಲಿ ಕಾರ್ಮಿಕರಿಂದ ಕೆಲಸ ನಿರ್ವಹಿಸಿರುತ್ತಾರೆ ಹಾಗೂ ಹನುಮಂತಾಪುರ ಗ್ರಾಮದ ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ 2011–12ನೇ ಸಾಲಿನಲ್ಲಿ 32 ಫಲಾನುಭವಿಗಳು ಹಾಗೂ 2012–13ನೇ ಸಾಲಿನಲ್ಲಿ 41 ಫಲಾನುಭವಿಗಳು ಅಂದರೆ ಒಟ್ಟು 73 ಜನ ಫಲಾನುಭವಿಗಳಿಗೆ ಚೆಕ್ ಮೂಲಕ ಹಣ ಸಂದಾಯ ಮಾಡಿದ್ದು, ಈ ಯೋಜನೆಯ ಪ್ರಗತಿ ಸಾಧಿಸಲು ಮೇಲಾಧಿಕಾರಿಗಳು ಗುರಿ ನಿಗಧಿಪಡಿಸಿರುವುದರಿಂದ ನಿಗಧಿತ ಅವಧಿಯೊಳಗೆ ಪ್ರಗತಿ ಸಾಧಿಸುವ ಸಲುವಾಗಿ ಸ್ವಚ್ಛತಾ ಆಂದೋಲನ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳು ತಮ್ಮ ಸ್ವಂತ ಹಣದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಅಶಕ್ತರಾದ ಕಾರಣ ಚೆಕ್ ಮೂಲಕ ಹಣ ಸಂದಾಯ ಮಾಡಿದ್ದು, ಹಣ ಸಾಕಾಗದ ಕಾರಣ ಆ ಮೊತ್ತವನ್ನು ವಾಪಸ್ ಗ್ರಾಪಂ ಬ್ಯಾಂಕ್ ಖಾತೆಗೆ ಫಲಾನುಭವಿಗಳೇ ಖುದ್ದು ಜಮಾ ಮಾಡಿರುತ್ತಾರೆ. ಪ್ರಯುಕ್ತ ನಿಗದಿತ ಗುರಿ ಸಾಧಿಸುವ ಸಲುವಾಗಿ ಮುಂಗಡ ಹಣ ಪಾವತಿ ಮಾಡಿರುತ್ತಾರೆಯೇ ವಿನ: ಯಾವುದೇ ಹಣ ದುರುಪಯೋಗಪಡಿಸಿಕೊಂಡಿರುವುದಿಲ್ಲ ಎಂದು ವರದಿಸಿರುತ್ತಾರೆ.

2ನೇ ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ವಿಚಾರಣಾಧಿಕಾರಿ ವರದಿಯಲ್ಲಿ ತಿಳಿಸಿರುವ ಎರಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಿಲ್ಲ ಹಾಗೂ ಸ್ವಚ್ಛತಾ ಆಂದೋಲನದಡಿಯಲ್ಲಿ ಒಟ್ಟು 73 ಫಲಾನುಭವಿಗಳಿಗೆ

ಹಿಂದಿನ ಪಿಡಿಓ ಶ್ರೀ ಲಕ್ಷ್ಮೀಪತಿ ಇವರ ಅವಧಿಯಲ್ಲಿ ನಡೆದಿರುವುದು ತನಿಖಾ ವರದಿಯಿಂದ ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸ್ವಚ್ಛತಾ ಆಂದೋಲನದಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳು ತಮ್ಮ ಸ್ವಂತ ಹಣದಲ್ಲಿ ಶೌಚಾಲಯ ಕಟ್ಟಡವನ್ನು ಕಟ್ಟಿದ ನಂತರ ಹಣ ಮಂಜೂರು ಮಾಡಬೇಕಿದ್ದು, ನಿಯಮ ಉಲ್ಲಂಘಿಸಿ ಆಗಿನ ಪಿ.ಡಿ.ಓ ಆಗಿದ್ದ ಶ್ರೀ ಲಕ್ಷ್ಮೀಪತಿ ಇವರು ಹಣವನ್ನು ಫಲಾನುಭವಿಗಳಿಗೆ ಮುಂಚಿತವಾಗಿ ನೀಡಿರುತ್ತಾರೆ. ಆದ್ದರಿಂದ ದೂರುದಾರರು ತಿಳಿಸಿರುವಂತೆ ಅವರ ಕಾರ್ಯಾವಧಿಯಲ್ಲಿ ಅಂದರೆ ದಿ:27.05.2014 ರಿಂದ 24.09.2015ರವರೆಗೆ ನಡೆದ ವಿವಿಧ ಕ್ರಿಯಾ ಯೋಜನೆಯಡಿಯಲ್ಲಿನ ಯಾವುದೇ ಕಾಮಗಾರಿ ಕೆಲಸಗಳಲ್ಲಿ ಯಾವುದೇ ರೀತಿಯ ಅವ್ಯವಹಾರಗಳು ನಡೆದಿರುವುದಿಲ್ಲವೆಂದು ಹೇಳಿರುತ್ತಾರೆ.

ಕರ್ನಾಟಕ ಉಪಲೋಕಾಯುಕ್ತರ-2ರವರ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರಾದ ಶ್ರೀ ಭರಮಪ್ಪ, ಕಾರ್ಯದರ್ಶಿ, ಶ್ರೀ ತಿಪ್ಪೇಸ್ವಾಮಿ, ಪಿ.ಡಿ.ಓ ಮತ್ತು ಶ್ರೀ ಲೋಹಿತ್ ಕುಮಾರ್, ಪಿ.ಡಿ.ಓ ಇವರುಗಳು ಯಾವುದೇ ಕರ್ತವ್ಯಲೋಪ ಎಸಗಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಿರುವುದಿಲ್ಲ. ಶೌಚಾಲಯ ಕಟ್ಟಡವನ್ನು ಕಟ್ಟುವ ಮುಂಚಿತವಾಗಿ ಫಲಾನುಭವಿಗಳಿಗೆ ಹಣವನ್ನು ನೀಡಿ ನಿಯಮವನ್ನು 1ನೇ ಎದುರುದಾರರು ಉಲ್ಲಂಘನೆ ಮಾಡಿರುತ್ತಾರೆಂದು ಹಾಗೂ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನಿಗಧಿತ ಗುರಿ ಸಾಧಿಸುವ ಸಲುವಾಗಿ ಮುಂಗಡ ಹಣ ಪಾವತಿ ಮಾಡಿರುತ್ತಾರೆಂದು ಹೇಳಿದ್ದು, ಅದು ದೃಢಪಟ್ಟಿರುತ್ತದೆ. ಆದರೆ ನಿಗಧಿತ ಗುರಿ ಸಾಧಿಸುವ ಸಲುವಾಗಿ ನಿಯಮವನ್ನು ಉಲ್ಲಂಘನೆ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಶ್ರೀ ಬಿ.ಲಕ್ಷ್ಮೀಪತಿ, 1ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ಕರ್ನಾಟಕ ಲೋಕಾಯುಕ್ತರು ವರದಿಸಿರುತ್ತಾರೆ.

ಆದ್ದರಿಂದ, 1ನೇ ಎದುರುದಾರರಾದ ಶ್ರೀ ಬಿ. ಲಕ್ಷ್ಮೀಪತಿ ಇವರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮ 3(1)(i) ಮತ್ತು (iii)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಹಾಗೂ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ 14(ಎ)ರನ್ವಯ ವಿಚಾರಣೆ ನಡೆಸಲು ಉಪ ಲೋಕಾಯುಕ್ತರಿಗೆ-2 ವಹಿಸಬೇಕೆಂದು ಕೋರಿರುತ್ತಾರೆ.

ಮೇಲೆ ವಿವರಿಸಿರುವಂತೆ ಶ್ರೀ ಜಿ.ಕೆ. ಚನ್ನನಗೌಡ, ಹನುಮಂತಾಪುರ, ಇವರು ನೀಡಿರುವ ದೂರಿನನ್ವಯ ಉಪಲೋಕಾಯುಕ್ತರ-2ರವರು ಶಿಫಾರಸ್ಸು ಮಾಡಿರುವಂತೆ 1ನೇ ಎದುರುದಾರರಾದ ಶ್ರೀ ಬಿ. ಲಕ್ಷ್ಮೀಪತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಹಾಲಿ ಕಾರ್ಯನಿರ್ವಾಹಕ ಅಧಿಕಾರಿ ಇವರ ವಿರುದ್ಧದ ಇಲಾಖಾ ವಿಚಾರಣೆ ಹಾಗೂ ಶಿಸ್ತು ಕ್ರಮವನ್ನು ಕೈಗೊಳ್ಳಲು ಕರ್ನಾಟಕ

ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-11ರ ಉಪ ನಿಯಮ 14(ಎ)ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-2ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ ಆದುದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಸ ಸಂಖ್ಯೆ : ಗ್ರಾಪ 109 ವಿಸೇಬಿ 2017 ದಿನಾಂಕ: 23.06.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಶ್ರೀ ಬಿ. ಲಕ್ಷ್ಮೀಪತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, ಹಾಲಿ ಕಾರ್ಯನಿರ್ವಾಹಕ ಅಧಿಕಾರಿ, ಇವರ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಾವಳಿಗಳು 1957ರ ನಿಯಮ-11 ಮತ್ತು 11(ಎ)ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-2 ಕರ್ನಾಟಕ ಲೋಕಾಯುಕ್ತ ರವರಿಗೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/06/2017
(ಎಸ್ ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು-ಬಿ ಮತ್ತು ಸಿ)(ಪ್ರಭಾರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:-

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:-

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.